<u>ಓ.ಎಸ್. ನಂ.649/2013 ರಲ್ಲಿ</u>
ಪಿ.ಡಬ್ಲ್ಯೂ-1(ಶಿವಲಿಂಗಯ್ಯ @ ಚಂದ್ರ)

ದಿನಾಂಕ 23.09.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು 4 ನೇ ಪ್ರತಿವಾದಿ ಪರ ಶ್ರೀ ಬಿ.ವಿ.ಎಲ್., ವಕೀಲರಿಂದಃ-</u>

ದಾವಾ ಸ್ವತ್ತುಗಳು ಹೇಗೆ ಬಂದವು ಎಂದರೆ ಪಿತ್ರಾರ್ಜಿತ ಸ್ವತ್ತುಗಳು. ಎಲ್ಲಾ ದಾವಾ ಸ್ವತ್ತುಗಳು ಮೂಲತಃ ನಮ್ಮ ತಾತ ಸಿದ್ದಯ್ಯರವರಿಗೆ ಸೇರಿದ್ದವು. ಮಾಕಳಿ ಹೊಸಹಳ್ಳಿಯ ಆಸ್ತಿಗಳು ಮೂಲತಃ ಕಾಳಮ್ಮನವರಿಗೆ ಅವರ ತಂದೆಯಿಂದ ಬಂದ ಆಸ್ತಿಗಳು ಎಂದರೆ ಸಾಕ್ಷಿಯು ಸಿದ್ದಯ್ಯನಿಗೆ ಪಹಣಿಗಳು ಬಂದಿವೆ ಎಂದು ನುಡಿಯುತ್ತಾರೆ. ಮಾಕಳಿ ಹೊಸಹಳ್ಳಿಯ ಆಸ್ತಿಗಳು ಸಿದ್ದಯ್ಯನವರಿಗೆ ಸೇರಿದ್ದವು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ, ಅವು ಪಹಣಿಗಳು. ನಾನು ಯಾವುದೇ ದಾಖಲೆ ಕೊಟ್ಟಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಕಳಿ ಹೊಸಹಳ್ಳಿಯ ಆಸ್ತಿಗಳು ಕಾಳಮ್ಮನಿಗೆ 1925 ರ ವಿಲ್ ಮುಖಾಂತರ ಬಂದ ಆಸ್ತಿಗಳು ಎಂದರೆ ಸಾಕ್ಷಿಯ ಕಾಳಮ್ಮ ವಿಲ್‌ನಲ್ಲಿ ಸಿದ್ದಯ್ಯನಿಗೂ ಬರಬೇಕೆಂದು ಹೇಳಿದ್ದಾರೆ ಎಂದು ನುಡಿಯುತ್ತಾರೆ. ವಿಲ್ ಪತ್ರದ ಬಗ್ಗೆ ವಾದಪತ್ರ ಹಾಗೂ ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ವಿಲ್ ಬಗ್ಗೆ ನಮಗೆ ಗೊತ್ತೇ ಇರಲಿಲ್ಲ, ಅದರ ಪ್ರತಿ ತೆಗೆದು ನೋಡಿದಾಗ ಗೊತ್ತಾಯಿತು ಎಂದು ನುಡಿಯುತ್ತಾರೆ.

ಕಾಳಮ್ಮ 4 ನೇ ಪ್ರತಿವಾದಿ ಹನುಮಂತಯ್ಯನವರಿಗೂ ಸಹ ಒಂದು ವಿಲ್ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಕಾಳಮ್ಮನವರಿಗೆ ಸ್ವತ್ತುಗಳು ಸ್ವಯಾರ್ಜಿತವಾಗಿ ಬಂದ

ಸ್ವತ್ತುಗಳಾಗಿದ್ದು ಅವುಗಳನ್ನು ಹನುಮಂತಯ್ಯನವರಿಗೆ ವಿಲ್ ಬರೆದಿದ್ದಾರೆ ಎಂದರೆ ಸಾಕ್ಷಿಯು ಕಾಳಮ್ಮನ ತಂದೆಯ ಸ್ವತ್ತುಗಳು ಎಂದು ನುಡಿಯುತ್ತಾರೆ. ಕೋಳಮಾರನಕುಪ್ಪೆಯ ಆಸ್ತಿಗಳು ನಿಮ್ಮ ತಂದೆ ಮತ್ತು 7 ನೇ ವಾದಿಯ ನಡುವೆ ವಿಭಾಗ ಆದವು ಎಂದರೆ ಸಾಕ್ಷಿಯು ಸಿದ್ದಯ್ಯನ ಮೊದಲನೇ ಹೆಂಡತಿ ಮಂಚಮ್ಮನ ಆಸ್ತಿಗಳು, ಭಾಗ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಂದಾಯ ಖಾತೆ ದಾಖಲೆಗಳು ಚನ್ನಂಕಯ್ಯ ಮತ್ತು ನಿಂಗಯ್ಯನವರ ಹೆಸರಿನಲ್ಲಿ ಆಗಿವೆ ಎಂದರೆ ಗೊತ್ತಿಲ್ಲ. ಕೋಳಮಾರನಕುಪ್ಪೆಯ ಆಸ್ತಿಗಳನ್ನು ಚನ್ನಂಕಯ್ಯ ಮತ್ತು ನಿಂಗಯ್ಯ ಖಾತೆಯಂತೆ ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿಯು ಅವರ ಮಂಚಮ್ಮನ ಆಸ್ತಿ ಎಂದು ನುಡಿಯುತ್ತಾರೆ. ಆ ಆಸ್ತಿಗಳು ಮಂಚಮ್ಮನ ಆಸ್ತಿಗಳು ಎಂದು ವಾದಪತ್ರದಲ್ಲಿ ಬರೆಸಿಲ್ಲ. ಮಂಚಮ್ಮನ ಆಸ್ತಿಗಳು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮಂಚಮ್ಮನ ಹೆಸರಿಗೆ ಆಗಿರುವ ಕ್ರಯಪತ್ರ ನಿಪಿ-2 ರಲ್ಲಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಿಪಿ-2 ರಲ್ಲಿರುವ ಆಸ್ತಿಗಳ ಖಾತೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನಮ್ಮ ತಂದೆ ಮತ್ತು ಚಿಕ್ಕಪ್ಪನ ಹೆಸರಿನಲ್ಲಿದ್ದವು, ಈಗ ಬೇರೆಯವರಿಗೆ ಮಾರಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳಲ್ಲಿ ಚನ್ನಂಕಯ್ಯ ಅವರ ಭಾಗದ ಆಸ್ತಿಯನ್ನು, ನೀವು ನಿಮ್ಮ ಭಾಗದ ಆಸ್ತಿಯನ್ನು ಮಾರಿದ್ದೀರಿ ಎಂದರೆ ಸಾಕ್ಷಿಯು ನಮ್ಮ ತಂದೆಯೂ ಮಾರಿದ್ದಾರೆ, ನನ್ನ ಚಿಕ್ಕಪ್ಪನೂ ಮಾರಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ಮತ್ತು ಚಿಕ್ಕಪ್ಪ ಮಾರಾಟ ಮಾಡಿರುವ ಆಸ್ತಿಗಳ ಕ್ರಯಪತ್ರಕ್ಕೆ 4 ನೇ ಪ್ರತಿವಾದಿ ಪಾರ್ಟಿಯಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ ಮಾರಾಟ ಮಾಡಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ, ಸದರಿ ಕ್ರಯಪತ್ರಗಳನ್ನು ಸಹ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆ ಈಗಾಗಲೇ ವಿಭಾಗ ಆಗಿದ್ದು ನಮ್ಮ ತಂದೆಯ ಭಾಗದ ಆಸ್ತಿಗಳನ್ನು ಈಗಾಗಲೇ ಮಾರಾಟ ಮಾಡಿದ್ದು ಆದ್ದರಿಂದ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚನ್ನಂಕಯ್ಯನವರೇ ಆಸ್ತಿಗಳನ್ನು ಪ್ರತ್ಯೇಕವಾಗಿ ಮಾರಿದ್ದಾರೆ, ನಿಮ್ಮ ತಂದೆ ಆಸ್ತಿಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರ ತಾಯಿಯ ಆಸ್ತಿಗಳನ್ನು ಮಾರಿದ್ದಾರೆ, ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. ಕೋಳಮಾರನಕುಪ್ಪೆಯ ಆಸ್ತಿಗಳನ್ನು ನಿಮ್ಮ ತಂದೆ ಮತ್ತು ಚಿಕ್ಕಪ್ಪ ಭಾಗ ಮಾಡಿಕೊಂಡಿದ್ದು ಪ್ರತ್ಯೇಕವಾಗಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಭಾಗವೇ ಆಗಿಲ್ಲ ಎಂದು ನುಡಿಯುತ್ತಾರೆ.

ನಿಪಿ-3 ರಂತೆ ನಿಮ್ಮ ತಂದೆ ಆಸ್ತಿಗಳನ್ನು ಹಂಚಿದ್ದಾರೆ ಎಂದರೆ ಸಾಕ್ಷಿಯು ಪಾರಿಕತ್ತೇ ಆಗಿಲ್ಲ, ಸುಳ್ಳು ಎಂದು ನುಡಿಯುತ್ತಾರೆ. 1978-79 ರಲ್ಲಿ ಖಾತೆ ಯಾರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ದಾಖಲೆ ಇದೆ, ವಿಭಾಗವೇ ಆಗಿಲ್ಲ ಮೋಸ ಮಾಡಿದ್ದಾರೆ ಎಂದು ನುಡಿಯುತ್ತಾರೆ. 1978-78 ರ ಖಾತಾ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ. ನನ್ನ ತಾತ ದಿನಾಂಕ 11.06.1974 ರಲ್ಲಿ ಗಂಡು ಮಕ್ಕಳಿಗೆ ಮಾಡಿಕೊಟ್ಟ ಆಸ್ತಿಯನ್ನು ಹೊರತುಪಡಿಸಿ ಉಳಿದ ಆಸ್ತಿಯನ್ನು ಎರಡನೇ ಹೆಂಡತಿಯ ಮಕ್ಕಳಿಗೆ

ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನಿಪಿ-3 ವ್ಯವಸ್ಥಾ ಪತ್ರದ ಬಗ್ಗೆ ನಾನು ನ್ಯಾಯಾಲಯಕ್ಕೆ ಬಂದ ನಂತರ ಗೊತ್ತಾಯಿತು. ಮೋಸದಿಂದ ಯಾರು ಮಾಡಿದ್ದಾರೆ ಎಂದರೆ ಸಾಕ್ಷಿಯು ಸಿದ್ದಯ್ಯನವರು ವಿಭಾಗ ಮಾಡದೇ ಹೆಣ್ಣು ಮಕ್ಕಳಿಗೆ ಆಸ್ತಿಗಳನ್ನು ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸಿದ್ದಯ್ಯನವರು ನಾನು 5-6 ವರ್ಷದ ಹುಡುಗನಾಗಿದ್ದಾಗ ತೀರಿಕೊಂಡಿದ್ದಾರೆ. ಯಾವ ವರ್ಷ ಎಂದರೆ 1981-82 ರಲ್ಲಿ ಇರಬಹುದು. ನಿಪಿ-3 ವ್ಯವಸ್ಥಾ ಪತ್ರದ ಬಗ್ಗೆ ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಮಾಹಿತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಚನ್ನಂಕಯ್ಯ, ಹನುಮಂತಯ್ಯ ಮತ್ತು ನಿಂಗಯ್ಯರವರು ಬೇರೆ ಬೇರೆ ವಾಸ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ಮನೆ ಚಿಕ್ಕದಾಗಿದ್ದರಿಂದ ಬೇರೆ ಬೇರೆ ವಾಸವಿದ್ದರು ಎಂದು ನುಡಿಯುತ್ತಾರೆ.

ನಿಪಿ-19 ರಲ್ಲಿ ಮಾಕಳಿ ಹೊಸಹಳ್ಳಿಯ ಆಸ್ತಿಗಳು ಹನುಮಂತಯ್ಯನವರಿಗೆ, ಕೋಳಮಾರನಕುಪ್ಪೆಯ ಆಸ್ತಿಗಳು ನಿಂಗಯ್ಯನ ಹೆಸರಿಗೆ ಎಂದು ಬರೆಸಿದ್ದಾರೆ ಎಂದರೆ ಸುಳ್ಳು. ನಿಪಿ-19 ಕ್ಕೆ ನನ್ನ ತಂದೆ ಮತ್ತು ಚಿಕ್ಕಪ್ಪ ಒಪ್ಪಿಗೆ ಸಹಿ ಹಾಕಿದ್ದಾರೆ ಎಂದರೆ ಸುಳ್ಳು. ನಿಪಿ-19 ನ್ನು ನಾನು ಓದಿ, ತಿಳಿದುಕೊಂಡಿಲ್ಲ. ನಿಪಿ-22 ರಲ್ಲಿ ಚನ್ನಂಕಯ್ಯ ಮತ್ತು ನಿಂಗಯ್ಯರವರು ಬೇರೆ ಕಡೆ ಆಸ್ತಿ ಪಡೆದುಕೊಂಡಿದ್ದಾರೆ, ಆದ್ದರಿಂದ ಮಾಕಳಿ ಹೊಸಹಳ್ಳಿಯ ಆಸ್ತಿಗಳಲ್ಲಿ ಅವರಿಗೆ ಹಕ್ಕಿಲ್ಲ ಎಂದು ಬರೆದಿದೆ ಎಂದರೆ ಸುಳ್ಳು. ನಿಮ್ಮ ತಂದೆ ಬದುಕಿರುವವರೆಗೆ ಈ ದಾಖಲೆಗಳ ಬಗ್ಗೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರಿಗೆ ಬುದ್ಧಿ ಕಮ್ಮಿ ಎಂದು ನುಡಿಯುತ್ತಾರೆ.

ನಿಪಿ-23 ರಿಂದ ನಿಪಿ-36 ರಂತೆ ಪಹಣಿಗಳು ಹನುಮಂತಯ್ಯನವರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ವಿಭಾಗ ಆಗದೇ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಹನುಮಂತಯ್ಯನವರು ಸದರಿ ಆಸ್ತಿಗಳ ಮೇಲೆ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಸರ್ವೇ ದಾಖಲೆಗಳಲ್ಲಿ ಹನುಮಂತಯ್ಯನವರ ಹೆಸರು ನಮೂದಾಗಿದೆ ಎಂದರೆ ಸಾಕ್ಷಿಯು ಆಗಿರುವುದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ.

ವ್ಯಾಜ್ಯ ಕಾರಣ ಪ್ರಾರಂಭವಾದದ್ದು ಜನವರಿ-2001 ರಲ್ಲಿ ಎಂದು ಹೇಳಿದ್ದೇನೆ. ದಾವೆ ಸಲ್ಲಿಸುವ ಕಾಲಕ್ಕೆ ಮಾಕಳಿ ಹೊಸಹಳ್ಳಿಯ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿ. ಚನ್ನಂಕಯ್ಯನವರ ಮಕ್ಕಳು ನಮ್ಮ ಪರವಾಗಿಯೂ ಸಾಕ್ಷ್ಯ ಕೊಡಿ ಎಂದು ಲಿಖಿತ ರೂಪದಲ್ಲಿ ಕೊಟ್ಟಿಲ್ಲ, ಆದರೆ ಎಲ್ಲರ ಪರವಾಗಿ ಕೇಸು ನಡೆಸಿ ಎಂದು ವಕಾಲತ್ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಎಲ್ಲಾ ವಾದಿಗಳ ಪರವಾಗಿ ಸಾಕ್ಷಿ ಕೊಡುತ್ತಿದ್ದೇನೆ ಎಂದು ಬರೆಸಿದ್ದೇನಾ ಎಂದರೆ ಗೊತ್ತಾಗುತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಚನ್ನಂಕಯ್ಯನವರು ಬದುಕಿದ್ದಾಗ ಅವರು, ಅವರ ಪತ್ನಿ ಮತ್ತು ಮಕ್ಕಳು ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲದಿದ್ದರೂ ಸಹ 4 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಭಾಗ ಆಗಿತ್ತು, ವಿಭಾಗದಲ್ಲಿ ಬಂದ ಆಸ್ತಿಗಳನ್ನು ನಾವು ಮಾರಿಕೊಂಡಿದ್ದು, 4 ನೇ ಪ್ರತಿವಾದಿ ಭಾಗಕ್ಕೆ ಬಂದ ಆಸ್ತಿಗಳನ್ನು

ಕಬಳಿಸಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರ, ಸಹೋದರಿಯರು ಯಾವುದೇ ಮಾಹಿತಿ ಕೊಟ್ಟಿಲ್ಲದಿದ್ದರೂ ಸಹ ಅವರನ್ನು ಸೇರಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇತರೆ ವಾದಿಗಳು ಯಾರೂ ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸಾಕ್ಷಿಯು ನೀವೇ ಹೋಗಿ ಎಂದು ಹೇಳಿದ್ದಾರೆ ಎಂದು ನುಡಿಯುತ್ತಾರೆ. ಕೇಸಿನ ಬಗ್ಗೆ ಏನು ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6 ನೇ ಪ್ರತಿವಾದಿಯ ವಾರಸುದಾರರ ಪರ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.